2. ಚಿಕ್ಕಬಳ್ಳಾಪುರದಿಂದ ಕಳವರದ ಬೆಟ್ಟಕ್ಕೆ ಸದಾಕಾಲದಲ್ಲಿಯೂ ಜನಗಳು ಮಾತ್ರ ಹೋಗತಕ್ಕ 3-ಗಜ ಅಗಲ ಮತ್ತು 6 ಫರ್ಲಾಂಗು ಉದ್ದವುಳ್ಳ ಕಾಲುಹಾದಿ. ಈ ಹಾದಿಯು ಫಾರೆಸ್ಟ್ ಡಿಮಾರ್ಕೇಷನ್ 4ನೆ ಮೈಲಿಯ 6ನೆ ಫರ್ಲಾಂಗಿನ ದಕ್ಷಿಣಕ್ಕೆ 2 ಸರಪಣಿಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಪಶ್ಚಿಮಕ್ಕೆ ಹರಿದು ಫಾರೆಸ್ಟಿನಲ್ಲಿರುವ ಬೆಟ್ಟದವೇಲಿರುವ ಗುಡಿಯನ್ನು ಕೇರುತ್ತೆ.

3. ನೊಕ್ಕುಂಟೆ ಹೊಸೂರಿನಿಂದ ಮುಂಜೇನಹಳ್ಳಿಗೆ ಸದಾಕಾಲದಲ್ಲಿಯೂ ಜನಗಳು ಮತ್ತು ದನಗಳು ತಿರಗಬಹುದಾದ 3 ಗಜ ಅಗಲ ಮತ್ತು ಒಂದುಮೈಲಿ ಉದ್ದವುಳ್ಳ ಕಾಲುದಾರಿ. ಈ ದಾರಿಯು ಡಿಮಾರ್ಕೇಷನ್ ಲೈನು 11ನೆ ಮೈಲಿಯ 1ನೆ ಫರ್ಲಾಂಗು ಕಲ್ಲಿನ ಪಶ್ಚಿಮದಲ್ಲಿ 5ನೆ ಸರಪಣಿಯ ಹತ್ತರ ಫಾರೆಸ್ಟನ್ನು ಪ್ರವೇಶಿಸಿ ಉತ್ತರಕ್ಕೆ ಹರದು ಡಿಮಾರ್ಕೇಷನ್ ಲೈನಿನ 16ನೆ ಮೈಲಿಯ 7ನೆ ಫರ್ಲಾಂಗು ಕಲ್ಲಿನ ಪಶ್ಚಿಮದಲ್ಲಿ 4ನೆ ಸರಪಣಿ ಹತ್ತರ ಫಾರೆಸ್ಟನ್ನು ಬಿಡುತ್ತೆ.

4. ಕನಗಾನಹಳ್ಳಿಯಿಂದ ಮುತ್ತರಾಯನಗುಡಿಗೆ ಸದಾಕಾಲದಲ್ಲಿಯೂ ಜನಗಳು ಮತ್ತು ದನಗಳು ಹೋಗಬಹುದಾದ 3 ಗಜ ಅಗಲ ಮತ್ತು 1 ಮೈಲಿ ಉದ್ದವುಳ್ಳ ಕಾಲುದಾರಿ. ಈ ದಾರಿಯು ಸ್ಟೇಟ್ ಫಾರೆಸ್ಟಿನ ಡಿಮಾರ್ಕೇಷನ್ ಲೈನಿನ 11ನೆ ಮೈಲಿ 4ನೆ ಫರ್ಲಾಂಗುಕಲ್ಲಿನ ದಕ್ಷಿಣಕ್ಕೆ 4ನೆ ಸರಪಣಿಯ ಹತ್ತರ ಪ್ರವೇಶಿಸಿ ವಾಯವ್ಯ ದಿಕ್ಕಿನಲ್ಲಿ ಹರದು ಡಿಮಾರ್ಕೇಷನ್ ಲೈನಿನ 15ನೆ ಮೈಲಿಯ ಉತ್ತರದಲ್ಲಿ 4ನೆ ಸರಪಣಿಯ ಹತ್ತರ ಫಾರೆಸ್ಟನ್ನು ಬಿಡುತ್ತೆ.

5. ಕಾರ್ಲಹಳ್ಳಿಯಿಂದ ಮಂಜೇನಹಳ್ಳಿಗೆ ಯಾವಾಗಲೂ ಜನಗಳು, ದನಗಳು, ಮತ್ತು ಭಂಡಿಗಳು ತಿರಗಬಹುದಾದ 5 ಗಜ ಅಗಲ ಮತ್ತು 1 ಮೈಲಿ 1 ಫರ್ಲಾಂಗು ಉದ್ದವುಳ್ಳ ಭಂಡಿಜಾಡು. ಈ ಜಾಡು ಸ್ಟೇಟ್ ಫಾರೆಸ್ಟನ್ನು ಡಿಮಾರ್ಕೇಷನ್ 13ನೆ ಮೈಲಿಯ 4ನೆ ಫರ್ಲಾಂಗು ಕಲ್ಲಿನ ಪೂರ್ವಕ್ಕೆ 2ನೆ ಸರಪಣಿಯ ಹತ್ತರ ಪ್ರವೇಶಿಸಿ ಉತ್ತರಕ್ಕೆ ಹರದು ಅದೇ ಡಿಮಾರ್ಕೇಷನ್ ಲೈನಿನ 15ನೆ ಮೈಲಿಯ 1ನೆ ಫರ್ಲಾಂಗಿನ ಪೂರ್ವಕ್ಕೆ 5ನೆ ಸರಪಣಿಯ ಹತ್ತರ ಫಾರೆಸ್ಟನ್ನು ಬಿಡುತ್ತೆ.

ನರಸಿಂಹದೇವರ ಬೆಟ್ಟದ III‌ನೆ ಬ್ಲಾಕ್.

1. ಪಾವಂಡಹಳ್ಳಿಯಿಂದ ದಂಡಿಗಾನಹಳ್ಳಿಗೆ ಯಾವಾಗಲೂ ಜನಗಳು ಮತ್ತು ದನಗಳು ತಿರಗಬಹುದಾದ 3 ಗಜ ಅಗಲ ಮತ್ತು 4 ಮೈಲಿ 3 ಫರ್ಲಾಂಗು ಉದ್ದವುಳ್ಳ ಕಾಲುದಾರಿ. ಇದು ಸ್ಟೇಟ್ ಫಾರೆಸ್ಟನ್ನು ಡಿಮಾರ್ಕೇಷನ್ ಲೈನಿನ 4ನೆ ಮೈಲಿಯ 6ನೆ ಫರ್ಲಾಂಗು ಕಲ್ಲಿನ ದಕ್ಷಿಣದಲ್ಲಿ 4ನೆ ಸರಪಣಿಯ ಹತ್ತರ ಪ್ರವೇಶಿಸಿ ಪಶ್ಚಿಮಕ್ಕು ಮತ್ತು ವಾಯವ್ಯಕ್ಕು ಹರದು ಅದೇ ಡಿಮಾರ್ಕೇಷನ್ ಲೈನಿನ 16ನೆ ಮೈಲಿಯ 1ನೆ ಫರ್ಲಾಂಗಿನ ಪೂರ್ವಕ್ಕೆ 5ನೆ ಸರಪಣಿಯ ಹತ್ತರ ಫಾರೆಸ್ಟನ್ನು ಬಿಡುತ್ತೆ.

ಹೆಚ್. ರಾಮೈಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 4ನೆ ಅಕ್ಟೋಬರ್ 1909.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ್ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿಯೂ, ಆಕಾರ ಕಂಡ ಬಂಜರು ಜಮೀನುಗಳಲ್ಲಿಯೂ, ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿಯೂ, ಅಮೃತಮಹಲ್ ಕಾವಲ್‌ಗಳಲ್ಲಿಯೂ, ದೊರಿಯುವ ಕೆಳಗೆ ವಿವರಿಸುವ ಪಸಾರೆ ಜಿನಸಿಗಳನ್ನು 1909—10ನೆ ಸಾಲಿಗೆ ಜಮಾಯಿಸುವ ಹಕ್ಕನ್ನು ಬಹಿರಂಗವಾಗಿ ಈ ಕೆಳಗಿನ ತಪಶೀಲ್ ಪಟ್ಟಿಯಲ್ಲಿ ಕಾಣುವ ಆಫಿಸರಿಂದ ತಾಲ್ಲೂಕ್‌ವಾರ್ ಯಾ ಹೋಬಳಿವಾರ್ ಹರಾಜು ಹಾಕಿಸಲ್ಪಡುತ್ತೆ :—

ನಂಬರ್.	ತಾಲ್ಲೂಕುಗಳ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಲ್ಪಡುವ ಆಫಿಸರರ ಹಸರು.
1	ಮೂಡಿಗೆರೆ	15—11—09	ತಾಲ್ಲೂಕು ಆಫೀಸಿನಲ್ಲಿ ಅಥವಾ ತಾಲ್ಲೂಕು ಕಛೇರಿಯಲ್ಲಿ ನಡಿಯತಕ್ಕ ದ್ದು.	ತಾಲ್ಲೂಕು ಅಸಿಸ್ಟಾಂಟ್ ಗಳು ಮತ್ತು ಅಥವಾ ತಾಲ್ಲೂಕು ರೇಂಜ್ ಆಫಿಸರುಗಳು.
2	ಚಿಕ್ಕಮಗಳೂರು	17—11—09		
3	ಕಡೂರು	19—11—09		
4	ತರೀಕೆರೆ	20 11—09		
5	ಯಡೇಹಳ್ಳಿ ಸಬ್ ತಾಲ್ಲೂಕು ..	22—11—09		
6	ಕೊಪ್ಪ	23—11—09		

ಪಸಾರೆ ಜಿನಸಿಗಳ ತಪಶೀಲ್.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟುವಾಳದಕಾಯಿ, 4. ದಿಂಡಗದ ಗೋಂದು, 5. ಕಾಡು ಅರಿಶಿನ, 6. ಜೇನು ಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಚಗಚೆ ಬೀಜ, 13. ಹೊಂಗೇಬೀಜ 14. ಗೇರುಬೀಜ, 15. ಹಾಲುಮಡ್ಡಿ, 16. ಸಾರಗದಕೊಂಬು, 17. ಗುಗ್ಗಳ, 18. ಬ್ಯಾಲದ ಹಂಣು, 19. ಸೀತಾಫಲದಹಂಣು, 20. ಅಳಲೇಕಾಯಿ, 21. ಹುಣಸೇಹಂಣು, 22. ಕಿರಿ ಈಚಲು, 23. ಗೇರು, 24. ಕಲ್ಲುಹುವ್ವು, 25. ಕಲ್ನಾರು, 26. ಕಾಡು ಯಾಲಕ್ಕಿ.

2. ಚಡ ದರಖಾಸ್ತುದಾರನು ಹರಾಜು ಮಂಜೂರಾದ ಕೂಡ್ಲೇ ಶೇಕಡಾ 25 ರಂತೆ ಆಗುವ ಮೊಬಲಗನ್ನು ತೇವಣಿ ಕಟ್ಟುತಕ್ಕದ್ದು. ಅಲ್ಲದೇ ಕಂಟ್ರಾಕ್ಟ್ ಷರತ್ತು ಮೇರೆ ನಡಿಯಲು ತಕ್ಕ ಖಾತರಿ ಜಾಮೀನು ಸಹಾ ಕೊಡಬೇಕು. ಹಾಗೆ ಮಾಡದೇ ತಪ್ಪಿದಲ್ಲಿ ಕೂಡ್ಲೇ ಬಾಬು 2ನೆ ದಫಾ ಹರಾಜು ಮಾಡಲ್ಪಟ್ಟು ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ ಮಾಡಲ್ಪಡುತ್ತೆ.

3. ದರಖಾಸ್ತುದಾರನಿಗೆ ಹರಾಜು ಮಂಜೂರಾದ ಸಂಗತಿಯನ್ನು ತಿಳಿಸಿದ ಬಂದು ತಿಂಗಳ ವಳಗಾಗಿ ಬಾಕಿ ಮೊಬಲಗನ್ನೆಲ್ಲಾ ಪಾವತೀ ಮಾಡಬೇಕು. ತಪ್ಪಿದರೆ ಮೊದಲು ಕೊಟ್ಟಿದ್ದ $\frac{1}{4}$ ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಬಾಕೀ ಆಗುವ ಹಣವನ್ನು ರೆವಿನ್ಯೂ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡುತ್ತೆ.

4. ಹರಾಜು ಮೊಬಲಗ್ಯೆ ರೂಪಾಯಿ 1ಕ್ಕೆ ಬಂದಾಜೆ ಲೋಕಲ್ ಸೆಸ್ಸು ಕೊಡಬೇಕು.

5 ಹಿಡುವಳೀ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅನುಭವಯಿಗಳಲ್ಲಿ ದೊರಿಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರ್ರ ಸ್ಥಿರಪಟ್ಟು ಹಕ್ಕುದಾರಿ ವಿಷಯದಲ್ಲಿ ಇಜಾರೆದಾರ್ರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅನುಭವಯಿ ಫಲದ ಉತ್ಪತ್ತಿ ಮೇಲ್ಕಂಡ ಹರಾಜಿಗೆ ಸೇರುವದಿಲ್ಲ.

8. ಸದಾಜ್ಞ ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

ಬಿ. ಹೀರಾಸಿಂಗ್,
ಫಾರ್ ಡೆಪ್ಯೂಟಿ ಕಮಿಷನರ್, ಕಡೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಫಿಕೇಷ್ಟ.

ತಾರೀಖು 14ನೆ ಅಕ್ಟೋಬರ್ 1909.

ಈ ದೇವನಹಳ್ಳಿ ತಾಲ್ಲೂಕು ಸರ್ವೆ ಸೆಟ್ಲು ಮೆಂಟಾಗಿ 12 ವರುಷಕ್ಕೆ ಮೇಲ್ಪಟ್ಟು ಇರುವದ್ದರಿಂದ ತಾಲ್ಲೂಕು ರಿಕಾರ್ಡಿನಲ್ಲಿ ರತಕ್ಕ ಕುಳವಾರು ಜಮಾಬಂದಿ ಚಿಟ್ಟೆಗಳು ರೂಲ್ಸ್ ಅನುಸರಿಸಿ ಜಲಾಯಿಸಲ್ಪಡುತ್ತೆ. ಇವುಗಳ ಕಾಪಿ ಅಪೇಕ್ಷೆ ಇರತಕ್ಕವರು ಈ ಲಾಗಾಯಿತು 3 ತಿಂಗಳವಳಗಾಗಿ ಕಾಪಿ ತಯಿಷ್ಟ್ರಡಿ ತಾಲ್ಲೂಕಿಗೆ ದರಖಾಸ್ತು ಕೊಟ್ಟು ಕಾಪಿ ಪಡದುಕೊಳ್ಳಬಹುದು ಮಾಯಿದೆ ಗತಿಸಿದ ನಂತರ ದೊರಿಯಲಾರದು.

ನೋಟಿಸ್.

ತಾರೀಖು 14ನೆ ಅಕ್ಟೋಬರು 1909.

ಹೊಸಕೋಟೆ ತಾಲ್ಲೂಕಿನ ಡಿಟ್ಟೆಂ ಚಿಟ್ಟೆಗಳು ಮತ್ತು ಕುಳವಾರ್ ಚಿಟ್ಟೆಗಳು ಅಂದರೆ ಅವ್ವಲ್ ಮತ್ತು ದುವ್ವಂ ನಂಬರ್ ಗಳೂ ಸಹಾ ಈ ನೋಟೀಸ್ ಮೈಸೂರ್ ಗೆಜೆಟ್ಟಿನಲ್ಲಿ ಪ್ರಕಟಿಸಿದ ಮೂರುತಿಂಗಳ ನಂತರ ನಾಶಪಡಿಸಲ್ಪಡುತ್ತೆ. ಇದನ್ನು ಸನ್ 1895ನೆ ಇಸವಿ ಮಾರ್ಚ್ 11ನೆ ತಾರೀಖು ಗವರ್ನಮೆಂಟ್ ಪ್ರೊಸೀಡಿಂಗ್ಸ್ ನಂಬರ್ 1452ಎ-30—R. F. 157-93 ಹುಕುಂ ಪ್ರಕಾರ ನಾಶಪಡಿಸಲ್ಪಡುತ್ತೆ.

ರಿಕಾರ್ಡಿಗೋಸ್ಕರವಾಗಲಿ ಅಥವಾ ಉಪಯೋಗಕಾಗಲಿ ಸೈ ಮೊಹರಾದ ಕಾಪಿಗಳನ್ನು ಯಾರಾದರೂ ಅಪೇಕ್ಷಿಸಿದರೆ ಮೇಲೆ ನಮೂದಿಸಿರುವ 2 ತಿಂಗಳು ಮಾಯಿದೆ ಒಳಗಾಗಿ ಹೊಸಕೋಟೆ ತಾಲ್ಲೂಕ್ ಅಮಲ್ದಾರ್ರಿಗೆ ಬರದುಕೊಳ್ಳಬಹುದು.

ಟಿ. ರಾಯಲು ಚೆಟ್ಟಿ,
ಫಾರ್ ಡೆಪ್ಯೂಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಇನ್ಸ್ಟಹಾರ್ನಾಮೆ.

ಮಾಲೂರು ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ದೊಡ್ಡ ಸಬ್ಬೇನಹಳ್ಳಿ ಮತ್ತು ನಂಬಿಗ ನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಮಾಲೂರು ಸಬ್ ಡಿವಿಜ್ ಆಫಿಸರವರ ರೂಬರೂಪ್ 1909ನೆ ನವೆಂಬರು ಮಾಹೆ 8 ಮತ್ತು 9ನೆ ತಾರೀಖು ದಿವಸ ಒಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪ್ಸೀಲು ಬಗ್ಯೆ 1909ನೆ ಇಸವಿ ಅಕ್ಟೋಬರು ತಾರೀಖು 14ನೆ ಮುಕ್ಕಾಂ 41ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 802, 803ನೆ ಪೇಜು ನೋಡತಕ್ಕದ್ದು.

ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿಗೆ ಸೇರಿದ ಜೋಡಿ ವಿಣಸಂದ್ರ ಮತ್ತು ಗೊಣೂರು ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಸಬ್ ಡಿವಿಜ್ ಸಾಹೇಬರವರ ರೂಬರೂಪು 1909ನೆ ಇಸವಿ ನವೆಂಬರು ಮಾಹೆ 15 ಮತ್ತು 16ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ಅಕ್ಟೋಬರು ತಾರೀಖು 21ನೆ ಮುಕ್ಕಾಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 820ನೆ ನಂಬರ್ ಪೇಜು ನೋಡತಕ್ಕದ್ದು.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಜೋಡಿ ಕುತಾಂಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ನವಂಬರು ಮಾಹೆ 16ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫ್ಸೀಲ್ ಬಗ್ಗೆ ಸ|| 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮುಕ್ರಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 821ನೆ ನಂಬರ್ ಪೇಜು ನೋಡತಕ್ಕದ್ದು.

ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿಗೆ ಸೇರಿದ ಜೋಡಿ ದೊಂಮಲೂರು ಮತ್ತು ಪುರ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಸಬ್ ಡಿವೀಜ್ ಆಫಿಸರವರ ರೂಬರೂಬು 1909ನೆ ಇಸವಿ ನವಂಬರು 17 ಮತ್ತು 18ನೆ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫಶೀಲ್ ಬಗ್ಗೆ 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮುಕ್ರಂ 42ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 822—823ನೆ ನಂಬರು ಪೇಜು ನೋಡತಕ್ಕದ್ದು.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಕಾಯಂಗುತ್ತಾ ಶೆಟ್ಟಿಗಾನಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1909ನೆ ನವಂಬರ್ ಮಾಹೆ 18ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫಶೀಲುಗಳ ಬಗ್ಗೆ 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮುಕ್ರಂ 42ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 823—824ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ಶ್ಯಾಮಣ್ಣ,
ಛಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರವರ ಆಫೀಸುನಿಂದ—

ಪ್ರಕಟನೆ.

ತಾರೀಖು 20ನೆ ಅಕ್ಟೋಬರ್ 1909.

ಪೊಲೀಸ್ ಇನ್ಸ್‌ಪೆಕ್ಟರಾಗಿ ಇದ್ದು ಹಾಲೀ ನ್ಯೂತಪಟ್ಟು ಇರುವ ಮಹಮ್ಮದ್‌ಹುಸೇ ಎಂಬುವರಿಂದ ಸದರಿಯವರ ಬಾಬು ತು ಸಾಲಗಳಿಗಾಗಿ ವಸೂಲಾದ ಮೊಬಲಗು ಹನ್ನೆರಡು ರೂಪಾಯಿ ನಾಲ್ಕು ಆಣೆ (12—4—0) ಗಳು ನಮ್ಮ ಆಫೀಸಿನಲ್ಲಿ ಸಿಂ. ತು ಇರುತ್ತೆ. ಆದ್ದರಿಂದ ಈ ಪ್ರಕಟನೆಯ ತಾರೀಖು ಲಾಗಾಯಿತು ಆರು ತಿಂಗಳೊಳಗಾಗಿ ಮೇಲ್ಕಂಡ ಮಾಜಿ ಪೊಲೀಸ್ ಇನ್ಸ್‌ಪೆಕ್ಟರ್ ಮಹಮ್ಮದ್ ಹುಸೇರ ವಾರಸ್ದಾರ್ರುಗಳಾಗಲೀ, ಅಥವಾ ಸಾಲಗಾರರೇ ಆಗಲೀ ಹಕ್ಕು ಸ್ಥಿರಪಡಿಸದೇ ಹೋದರೆ, ಸದರಿ ಮೊಬಲಗನ್ನು ಗೌರ್ನಮೆಂಟ್ ಜಮೆಗೆ ತೆಗದುಕೊಳ್ಳಲ್ಪಡುತ್ತೆಂತಾ ಇದರ ಮೂಲಕ ಎಲ್ಲರಿಗೂ ತಿಳಿಯಪಡಿಸಿ ಇದೆ.

ಎಂ. ಪಿ. ವಿಶ್ವನಾಥರಾವ್,
ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ್ 1909.

ಸಾಗರ ತಾಲ್ಲೂಕಿನಲ್ಲಿ ಗೆರಸಪ್ಪಾ ಫಾಲ್ಸ್ ಬಳಿ ಇರುವ ಜೋಗಿನ ಟ್ರಾವಲರ್ಸ್ ಬಂಗ್ಲೆಯು ಸ|| 1909ನೆ ನವಂಬರು 1ರ ಲಾಗಾಯಿತು 27ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಿರುತ್ತಾಗಿ ಇದರಿಂದ ಸರ್ವ ಸ್ಸ ಜನರಿಗೆ ತಿಳಿಯಪಡಿಸಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ್ 1909.

ಇದರಿಂದ ಸರ್ವಸ್ಸ ಜನರಿಗೆ ತಿಳಿಯಪಡಿಸುವದೇನಂದರೆ :—ಸಾಗರ ತಾಲ್ಲೂಕಿಗೆ ಸೇರಿದ ಸಾಗರ ಮತ್ತು ಅನಂತಪುರದಲ್ಲಿ ರುವ ಟ್ರಾವಲರ್ಸ್ ಬಂಗಲೆಗಳನ್ನು ಸ|| 1909ನೆ ಇಸವಿ ನವಂಬರು 13ರ ಲಾಗಾಯಿತು 25ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಲ್ಪಟ್ಟಿರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.